ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 35 ನೇ ಸಂಚಿಕೆ ಕೊಪ್ಪ 27-3-1988 ಭಾನುವಾರ ಬೆಲೆ 25 ಪೈಸೆ

'ಅಸ್ಪೃಶ್ಯ'ವಾಗುತ್ತಿರುವ ಜಯಪುರದ ಶಾಲೆ!

(ವರದಿ: ಕೃಷ್ಣ ಭಂಡಾರಿ)

ಜಯಪುರ: ಕೆಲವೇ ವರ್ಷಗಳ ಹಿಂದೆ ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳೆಲ್ಲದರಲ್ಲೂ ಮುಂದಿದ್ದ ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯೀಗ ಶಾಲಾಭಿವೃದ್ಧಿ ಸಮಿತಿಯ ನಿರ್ಲಕ್ಷ್ಯದಿಂದ ಸಾಮಾನ್ಯ ಪೋಷಕರ ದೃಷ್ಟಿಯಲ್ಲಿ 'ಅಸ್ಪೃಶ್ಯ'ಗೊಳ್ಳುತ್ತಾ ನಡೆದಿದೆ.

ಇಲ್ಲಿರುವ ಆಳವಾದ ಬಾವಿಯು ಪಂಪ್‌ಸೆಟ್ ಕೆಟ್ಟು 2 ವರ್ಷದ ಮೇಲಾಗಿದೆ. ಶೌಚಗೃಹ ಕೊಳಕುಗಟ್ಟಿ, ಗಬ್ಬೆದ್ದು, ಕುಸಿಯಲಿಕ್ಕಾಗಿದೆ. ಶಾಲಾ ವಠಾರ ಬಿಕ್ಷುಕರಿಗೆ, ವಲಸೆ ಕಾರ್ಮಿಕರಿಗೆ, ಕಳ್ಳ ಕಾಕರಿಗೆ 'ಧರ್ಮ ಛತ್ರ'ವಾಗಿದೆ.

ದಕ್ಷತೆ!

ಮಳೆಗಾಲದಲ್ಲಿ ಸೋರುತ್ತಿದ್ದ ಈ ಶಾಲೆಗೆ ಕೆಲ ಸಮಯದ ಹಿಂದೆ ರಿಪೇರಿ ಮಾಡಲಾಗಿದ್ದರೂ ಸೋರುವುದು ನಿಂತಿಲ್ಲ. ಇದು ನಮ್ಮ ತಾ. ಅ. ಮಂ. ಇಂಜಿನಿಯರ್ ಕೃಷ್ಣಪ್ಪನವರ ದಕ್ಷತೆಗೆ ಸಾಕ್ಷಿಯಾಗಿದೆ. ಈ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರು ವರದಿ, ಮನವಿ, ದೂರು ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ.

ಶಾಲೆಗೆ ಮಕ್ಕಳನ್ನು ಸೇರಿಸಿಕೊಳ್ಳುವಾಗ ಇಲ್ಲಿನ ಶಿಕ್ಷಕ ವರ್ಗ ಸಮೀಪದ ಕಾನ್ವೆಂಟ್‌ನೊಂದಿಗೆ ಸ್ಪರ್ಧೆ ನಡೆಸಿದರೂ ಅನಂತರ ಮಕ್ಕಳ ಸರ್ವತೋಮುಖ ಬೆಳವಣಿಗೆ ಬಗ್ಗೆ ಯಾವ ಕಾಳಜಿಯನ್ನೂ ತೆಗೆದುಕೊಳ್ಳುತ್ತಿಲ್ಲವೆಂದು ಪೋಷಕರ ದೂರು. ಕ್ರೀಡೆಗಳಲ್ಲಿ ಯಾವುದೇ ಸಾಧನೆಯಿಲ್ಲದ ಈ ಶಾಲೆಗೆ ದೈಹಿಕ ಶಿಕ್ಷಕರೊಬ್ಬರು ಯಾಕೆ ಬೇಕು? ಎನ್ನುತ್ತಾರೆ ಜನ. ಇಲ್ಲಿನ ಶಿಶು ವಿಹಾರದ 16 ಮಕ್ಕಳಿಗೆ (ಲೆಕ್ಕಕ್ಕೆ 35!) ಇನ್ನೂ ಕನ್ನಡ ಅಕ್ಷರಗಳ ಗುರುತೇ ಆಗಿಲ್ಲ ಎಂದು ಪೋಷಕರೊಬ್ಬರು ವ್ಯಗ್ರರಾಗಿ ಹೇಳುತ್ತಾರೆ.

ಪಾಳು ಬಿದ್ದ ಭೂದಾನದ ಭೂಮಿ

ಈ ಶಾಲೆಗೆ 30 ವರ್ಷದ ಹಿಂದೆ ಭೂದಾನವಾಗಿ ಸಿಕ್ಕಿರುವ 5 ಎಕರೆ ಭೂಮಿಯಲ್ಲಿ ಆಟದ ಮೈದಾನ, ಅರಣ್ಯ ಇಲಾಖೆ ನೆರವಿನಿಂದ ಶಾಲಾ ವನ ಮುಂತಾದ ಚಟುವಟಿಕೆ ಹಮ್ಮಿಕೊಳ್ಳಬಹುದಿತ್ತು. ಆದರೆ ಪಾಳು ಬಿದ್ದಿದೆ. ಇನ್ನು ಕೆಲವು ಸಮಯದಲ್ಲಿ ಆಚೀಚೆಯಿಂದ ಒತ್ತುವರಿಯಾದರೂ ಆಶ್ಚರ್ಯವಿಲ್ಲ.

ಈ ಭೂಮಿಯ ಅಭಿವೃದ್ಧಿಗೆಂದು ಸುಮಾರು 25 ವರ್ಷಗಳಿಂದ 6000 ರೂ. ಹಣ ಶಾಲಾ ಸಮಿತಿಯ ಹೆಸರಲ್ಲಿ ಕರ್ನಾಟಕ ಬ್ಯಾಂಕ್ **ಉಳಿತಾಯ ಖಾತೆಯಲ್ಲಿ** ಇದೆ. ಅದನ್ನೇ **ಠೇವಣಿ** ಹಾಕಿಟ್ಟಿದ್ದರೂ ಇಷ್ಟೊತ್ತಿಗೆ ಅದೇ 50 ಸಾವಿರ ರೂ. ಆಗಿರುತ್ತಿತ್ತು!

ಹೊಲಸು ರಾಜಕೀಯ

ಈ ಶಾಲೆಯಲ್ಲಿ ಸಂಬಳವಿಲ್ಲದೆ ಉಚಿತವಾಗಿ ದುಡಿಯುವ ಅಚ್ಯುತರಂಥವರೂ ಇದ್ದಾರೆ; ತಿಂದ ಅನ್ನ ಜೀರ್ಣಿಸಿಕೊಳ್ಳಲು ಹೊಲಸು ರಾಜಕೀಯ, ಗುಂಪುಗಾರಿಕೆ ಮಾಡುವ ಅಧ್ಯಾಪಕರೂ ಇದ್ದಾರೆ. ಇದರಲ್ಲಿ, ಜಾತಿಯ ನೆಲೆಯಿಂದ ಮಕ್ಕಳ ಮುಗ್ಧ ಮನಸ್ಸಿನ ಮೇಲೆ ವ್ಯಂಗ್ಯ ಕುಹಕಗಳಿಂದ ಹಲ್ಲೆ ನಡೆಸುವ 'ಖ್ಯಾತಿ'ಯು ಸ್ಥಳೀಯ ಪ್ರೌಢಶಾಲಾ ಉಪಾಧ್ಯಾಯರೊಬ್ಬರ ಕೈಯಾಡಿಸುವಿಕೆಯೂ ಇದೆ ಎನ್ನಲಾಗುತ್ತದೆ.

ಇಂಥದೇ 'ಏಕ ಪಾತ್ರಾಭಿನಯ'ದ ರಾಜಕೀಯಕ್ಕೆ ಹೆಸರಾದ ಇಲ್ಲಿನ ಶಿಕ್ಷಕಿಯೊಬ್ಬರಿಂದಾಗಿ, ಸುಮಾರು 15 ವರ್ಷಗಳಿಂದಲೂ ಉತ್ತಮ ಸಾಂಸ್ಕೃತಿಕ ಚಟುವಟಿಕೆ ಹೊಂದಿದ್ದ ಈ ಶಾಲೆ ಈಗ ಆ ನಿಟ್ಟಿನಲ್ಲಿ ಮಕ್ಕಳಿಗೆ ನಿರಾಶೆಯ ಕೂಪವಾಗಿದೆ. ಕೆಲವು ತರಗತಿಗಳಲ್ಲಿ 80ರ ವರೆಗೂ ಮಕ್ಕಳಿದ್ದಾಗ್ಯೂ ಸಹ, ಉತ್ತಮ ಎಂದು ಹೆಸರು ಮಾಡಿದ್ದ ಇನ್ನೊಬ್ಬ ಶಿಕ್ಷಕಿಯನ್ನು 'ಹೆಚ್ಚುವರಿ' ಎಂದು ಹೇಳಿ ವರ್ಷದ ಮಧ್ಯದಲ್ಲಿ ಬೇರೆಡೆಗೆ ವರ್ಗಾಯಿಸಿರುವುದೂ ಇವರಿಂದಾಗಿಯೇ ಎನ್ನಲಾಗಿದೆ.

ತಪ್ಪು ಮಾಹಿತಿ

ಈ ಎಲ್ಲ ಅವ್ಯವಸ್ಥೆಗಳ ಬಗ್ಗೆ ಗ್ರಾಮಸಭೆಯಲ್ಲಿ ವಿಚಾರಿಸಿದಾಗ, 'ಸರ್ಕಾರ ಶಾಲಾಭಿವೃದ್ಧಿ ಸಮಿತಿಗಳನ್ನೇ ನೇಮಿಸಿಲ್ಲ. ಜವಾಬ್ದಾರಿ ತೆಗೆದುಕೊಳ್ಳುವವರೇ ಇಲ್ಲ' ಎಂಬ ಉತ್ತರ ಪ್ರಧಾನರಿಂದ ಬಂತು. ಆದರೆ ಇದು ತಪ್ಪು ಮಾಹಿತಿ. "2 ವರ್ಷದ ಹಿಂದೊಮ್ಮೆ ಸಮಿತಿಗಳನ್ನು ರದ್ದು ಮಾಡಿದ್ದ ಸರ್ಕಾರ ಪುನಃ ಅವನ್ನೇ ಮುಂದುವರಿಸುವಂತೆ ಸ್ಪಷ್ಟವಾಗಿ ಆದೇಶ ನೀಡಿದೆ" ಎನ್ನುತ್ತಾರೆ ಎ. ಇ. ಒ.

ಶಾಲೆಯ ಕೆಲವು ಕುಂದು-ಕೊರತೆಗಳ ಬಗ್ಗೆ ಜಿಲ್ಲಾ ಪರಿಷತ್ತು, ತಾ। ಪಂಚಾಯ್ತಿಗಳ ಗಮನಕ್ಕೆ ತಂದಿದ್ದೇವೆ, ಆದರೆ ಕೆಲಸವೇ ಆಗುತ್ತಿಲ್ಲ ಎನ್ನುವ ಮುಖ್ಯೋಪಾಧ್ಯಾಯರು, ಶಾಲೆಯೊಳಗೆ 'ರಾಜಕೀಯ' ಏನೂ ಇಲ್ಲ ಎನ್ನುತ್ತಾರೆ. ಅದೇನೂ ಇದು ಇರುವುದು ಊರಿಗೇ ಗೊತ್ತಿದೆ.

ಹಿರಿಯರೇ, ಈಗಲಾದರೂ...

ಊರಿನ ಹಿರಿಯರನೇಕರು ಶಾಲಾಭಿವೃದ್ಧಿ ಸಮಿತಿಯಲ್ಲಿದ್ದಾಗ್ಯೂ ಈ ಬಗ್ಗೆ [illegible] ಯಲ್ಲಿ ಮತ್ತೂ [illegible] ಈ ಶಾಲೆಗೆ [illegible] 'ಬದುಕು' ಕಾಣಿಸಲು ಆ ಹಿರಿಯರು ಈಗಲಾದರೂ ತೀವ್ರವಾಗಿ ಕಾರ್ಯೋನ್ಮುಖರಾಗಬೇಕಿದೆ.

ಕೊಳವೆ ಬಾವಿ ಹಗರಣ: ಸಿಪಿಐ ಧರಣಿ ಸತ್ಯಾಗ್ರಹ

ನ. ರಾ. ಪುರ: ಈ ತಾಲ್ಲೂಕಿನ ಬಾಳೆ ಮಂಡಲದಲ್ಲಿ ಕೊಳವೆ ಬಾವಿ ತೋಡಿಸುವಲ್ಲಿ ಮಂಡಲ ಉಪಪ್ರಧಾನರು ಅಕ್ರಮ ಎಸಗಿದ್ದಾರೆ ಮತ್ತು ಈ ಬಗ್ಗೆ ಗ್ರಾಮಸ್ಥರೊಡಗೂಡಿ ಅವರೊಂದಿಗೆ ಪ್ರಶ್ನಿಸಿದ ಸದಸ್ಯೆ ಐರೀನ್ ಡಿ' ಸಿಲ್ವಾ ಜೊತೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಆಪಾದಿಸಿರುವ ಸಿಪಿಐ ಘಟಕ, ಇದರ ವಿರುದ್ಧ ಮಾ. 21 ರಂದು ಮಂ। ಪಂ। ಕಛೇರಿಯೆದುರು ಧರಣಿ ನಡೆಸಿತು.

ಈ ಬಗ್ಗೆ ಪ್ರಧಾನ ಬಿ. ಎಸ್. ತಿಮ್ಮಯ್ಯ ನಡೆಸಿದ ಸಭೆಯಲ್ಲಿ ಅವರು ಇತರ ಸದಸ್ಯರ ಅಭಿಪ್ರಾಯ ಕೇಳದೇ ಉಪಪ್ರಧಾನರನ್ನು ಸಮರ್ಥಿಸಿದ್ದನ್ನು ಪ್ರತಿಭಟಿಸಿ ಸಿಪಿಐಯವರು ಸಭಾತ್ಯಾಗ ಮಾಡಿದರೆಂದು ಪತ್ರಿಕಾ ಹೇಳಿಕೆ ತಿಳಿಸಿದೆ.

ತೋಟದೂರು ರಸ್ತೆ ತಡೆ ಚಳುವಳಿ ಮುಂದಕ್ಕೆ

ಬಸರಿಕಟ್ಟೆ: "ತೋಟದೂರು-ಬಾಳೆಹೊಳೆ ರಸ್ತೆಗೆ ಜಲ್ಲಿ ಹಾಕಿಸುವುದಕ್ಕಾಗಿ 1,20,600 ರೂ. ಗಳು ಮಂಜೂರಾಗಿದ್ದು ಜಲ್ಲಿ ಸಂಗ್ರಹಣೆ ಈಗಾಗಲೇ ನಡೆಯುತ್ತಿದೆ. ಈ ರಸ್ತೆಗೆ ಟಾರು ಹಾಕಿಸುವುದಕ್ಕಾಗಿ ಯೋಜನೆಯೊಂದನ್ನು ಮಂಜೂರಾತಿಗಾಗಿ ಕಳಿಸಲಾಗಿದ್ದು ಅದೂ ಆಗುತ್ತದೆ. ಜಲ್ಲಿ ಕೆಲಸವನ್ನು ತುರ್ತಾಗಿ ಕೈಗೊಳ್ಳಲಿದ್ದು, ಈ ಬಗ್ಗೆ ನಮ್ಮಿಂದಾದ ಎಲ್ಲ ಪ್ರಯತ್ನ ಮಾಡುತ್ತೇವೆ"

—ಎಂಬುದಾಗಿ ಮೂಡಿಗೆರೆಯ ಲೋಕೋಪಯೋಗಿ ಸ॥ ಕಾ॥ ಇಂಜಿನಿಯರ್‌ರವರು ಪತ್ರ ಮೂಲಕವೂ ಹಾಗೂ ಮಾ. 13 ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ತಮ್ಮ ಸಹಾಯಕ ಇಂಜಿನಿಯರ್ ಮೂಲಕವೂ ತಿಳಿಸಿರುವುದನ್ನನುಸರಿಸಿ, ಮಾ. 20 ರಂದು ನಡೆಸಲು ಉದ್ದೇಶಿಸಿದ್ದ ರಸ್ತೆ ತಡೆ ಚಳುವಳಿಯನ್ನು ಮುಂದೂಡಿರುವುದಾಗಿ ಮೇರುತಿ ಜೇಸೀಸ್ ಅಧ್ಯಕ್ಷ ಜಗದೀಶ್ ಗಚ್ಚಿನಮಠ ತಿಳಿಸಿದ್ದಾರೆ.

ಮಲ್ಲೇಶಯ್ಯ ಧರ್ಮಛತ್ರಕ್ಕೆ ದತ್ತಿ ಸಚಿವರ ಭೇಟಿ

ಹರಿಹರಪುರ: ಕೊಪ್ಪ ತಾಲ್ಲೂಕ್ ಮಟ್ಟದ ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮೇಳನಕ್ಕೆ ಬಂದಿದ್ದ ಧಾರ್ಮಿಕ ದತ್ತಿ ಸಚಿವ ಅಮರನಾಥ ಶೆಟ್ಟಿ ಮತ್ತು ಯುವಜನ ಸೇವಾ ಸಚಿವರಾದ ಬಿ. ಎಲ್. ಶಂಕರ್, ಶಾಸಕರು ಹಾಗೂ ಇತರ ಗಣ್ಯರೊಂದಿಗೆ ಇಲ್ಲಿನ ಮಲ್ಲೇಶಯ್ಯನವರ ಧರ್ಮಛತ್ರಕ್ಕೆ ಭೇಟಿ ಕೊಟ್ಟಿದ್ದರು. ಛತ್ರದ ಕನ್ವೀನರ್ ಎನ್. ವೆಂಕಟಕೃಷ್ಣಪ್ಪ ಆಡಳಿತ ಮಂಡಳಿಯ ಪರವಾಗಿ ಮನವಿ ಸಲ್ಲಿಸಿದರು. ಛತ್ರದ ಒಂದು ಭಾಗದ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ 25,000 ರೂ. ಗಳ ಸಹಾಯ ದ್ರವ್ಯ ದೊರೆತಿದ್ದು, ಉಳಿದ ಹಣವನ್ನು ಛತ್ರದ ನಿಧಿಯಿಂದ ಭರಿಸಲು ಮಂಜೂರಾತಿ ಕೊಡಿಸಿಕೊಡುವ ಭರವಸೆ ನೀಡಿದರು

ವಾಲಿಬಾಲ್ ಪಂದ್ಯಾವಳಿ

ಕೊಪ್ಪ. ಇಲ್ಲಿನ ಶ್ರೀ ಬೆನಕ ಯುವಕ ಮಂಡಲದ ಆಶ್ರಯದಲ್ಲಿ ದಿನಾಂಕ **6.4.88ರ ಬುಧವಾರ** ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ತಾಲ್ಲೂಕುಗಳ ಮಟ್ಟದ ಪುರುಷರ ವಾಲಿಬಾಲ್ ಪಂದ್ಯಾವಳಿಯನ್ನು ಕೊಪ್ಪದ ಪುರಸಭಾ ಮೈದಾನದಲ್ಲಿ ಏರ್ಪಡಿಸಲಾಗಿದೆ. ಪ್ರವೇಶ ಧನ ಪ್ರತಿ ತಂಡಕ್ಕೆ 20.00 ರೂ. ಗಳು. ಆಡಲು ಇಚ್ಛಿಸುವ ತಂಡಗಳು ತಮ್ಮ ತಂಡದ ಹೆಸರನ್ನು ದಿನಾಂಕ 5.4.88ರ ಒಳಗಾಗಿ ರತ್ನಾಕರ, ಶಾಲಿಮಾರ್ ಹೇರ್ ಆರ್ಟ್ಸ್. ಜೆ.ಎಂ.ಜೆ. ಟಾಕೀಸ್ ಮುಂಭಾಗ, ಕೊಪ್ಪ, ಇವರಲ್ಲಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ರೈತ ಮಕ್ಕಳಿಗೆ 10 ತಿಂಗಳ ಕೃಷಿ ತರಬೇತಿ

ಶೃಂಗೇರಿ: 1988-89ನೇ ಸಾಲಿನಲ್ಲಿ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ 'ಕೃಷಿ ಪಾಠಶಾಲೆ'ಯಲ್ಲಿ ರೈತ ಮಕ್ಕಳಿಗೆ 10 ತಿಂಗಳಲ್ಲಿ ಕೃಷಿ, ತೋಟಗಾರಿಕೆ, ಮೀನುಗಾರಿಕೆ ಮತ್ತು ಪಶುಪಾಲನೆ ಬಗ್ಗೆ ತರಬೇತಿಯನ್ನು ಕೊಡಲಾಗುವುದು. ತರಬೇತಿ ಅವಧಿಯಲ್ಲಿ ತಿಂಗಳಿಗೆ 200 ರೂ. ವಿದ್ಯಾರ್ಥಿ ವೇತನ ಕೊಡಲಾಗುವುದು ಹಾಗೂ ಉಚಿತ ವಸತಿ ವ್ಯವಸ್ಥೆಯನ್ನು ಒದಗಿಸಲಾಗುವುದು. **ಅರ್ಜಿಗಳನ್ನು ಸ್ವೀಕರಿಸಲು 19.4.88 ಕಡೇ ದಿನಾಂಕ.**

ರೈತರು ತಮ್ಮ ಹತ್ತಿರದ ಕೃಷಿ ಸಹಾಯಕರಿಂದಾಗಲಿ, ಸಹಾಯಕ ಕೃಷಿ ಅಧಿಕಾರಿಗಳಿಂದಾಗಲಿ ಅಥವಾ ಕಛೇರಿಯಿಂದಾಗಲಿ ಹೆಚ್ಚಿನ ವಿವರ ಪಡೆಯಬಹುದೆಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಓದುಗರ ಪತ್ರಗಳು

ಶೃಂಗೇರಿಯಲ್ಲೂ ಸೀಮೆಎಣ್ಣೆ ಕೊರತೆ

ಮಾನ್ಯರೆ,

ಇತ್ತೀಚೆಗೆ ಶೃಂಗೇರಿಯಲ್ಲಿ ಸೀಮೆಯೆಣ್ಣೆಗಾಗಿ ಜನ ಸಾಮಾನ್ಯರು ಪರದಾಡಬೇಕಾಗಿ ಬಂದಿದೆ. ಸೀಮೆಯೆಣ್ಣೆ ಲಾರಿ ಬಂದು ಎಲ್ಲಾ ಅಂಗಡಿಗಳಿಗೂ ವಿತರಣೆಯಾಗಿದ್ದರೂ ಮಾರನೆಯ ದಿನವೇ 'ಇಲ್ಲ'ವಾಗಿರುತ್ತದೆ. ಇನ್ನು ಕೆಲವು ಅಂಗಡಿಗಳಲ್ಲಿ, "ನೀವು ಬೇರೆ ಸಾಮಾನುಗಳನ್ನು ತೆಗೆದುಕೊಳ್ಳುವ ಅಂಗಡಿಯಲ್ಲೇ ಸೀಮೆಯೆಣ್ಣೆಯನ್ನೂ ತೆಗೆದುಕೊಳ್ಳಿ; ನಮ್ಮಲ್ಲಿ ಇಲ್ಲ" ಎಂದುತ್ತರಿಸುತ್ತಾರೆ.

ಈ ಸಮಸ್ಯೆ ನೀಗಿಸಲು ಸಂಬಂಧ ಪಟ್ಟ ಇಲಾಖೆಗಳವರು ಈ ಕೆಳಗಿನ ಕೆಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ವಿನಂತಿ.

ಸೀಮೆಣ್ಣೆ ವಿತರಣೆಗಾಗಿಯೇ ಪ್ರತ್ಯೇಕ ಮಳಿಗೆ ತೆರೆದು ಹಂಚುವುದು ಅಥವಾ ಪ್ರತಿ ಪಡಿತರ ಕಾರ್ಡಿಗೆ ಪ್ರತಿವಾರ ಅಥವಾ ತಿಂಗಳಿಗೆ ಇಂತಿಷ್ಟು ಎಂದು ನಿಗದಿ ಮಾಡಿ ಈಗಿರುವ ನ್ಯಾಯಬೆಲೆ ಅಂಗಡಿಗಳಲ್ಲೇ ಹಂಚುವುದು; ಬೇರೆ ಕೆಲವು ಊರುಗಳಲ್ಲಿರುವಂತೆ ಸೀಮೆಣ್ಣೆ ಕೈಗಾಡಿಯವರಿಗೆ ಪರವಾನಗಿ ನೀಡುವುದು ಹಾಗೂ ಸೀಮೆಣ್ಣೆ ಕಾಳಸಂತೆ ದಾಸ್ತಾನು ಕೋರರ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವುದು.

ಶೃಂಗೇರಿಯಲ್ಲಿ ಹಿಂದೊಮ್ಮೆ ಸಕ್ರಿಯವಾಗಿದ್ದ 'ಬಳಕೆದಾರರ ವೇದಿಕೆ' ಹಾಗೂ ಸಂಬಂಧ ಪಟ್ಟ ಇಲಾಖಾಧಿಕಾರಿಗಳು, ಜಿಲ್ಲಾ ಪರಿಷತ್ತಿನವರು ಈ ಬಗ್ಗೆ ಗಮನ ನೀಡಲೆಂದು ಆಶಿಸುತ್ತೇವೆ.

—ನೊಂದ ಸೀಮೆಎಣ್ಣೆ ಬಳಕೆದಾರರು
ಶೃಂಗೇರಿ
(22 ಜನರ ಸಹಿಗಳಿವೆ.)

'ಮಾಮ್‌ಕೋಸ್'ನವರು ಗಮನಿಸಲಿ

ಮಾನ್ಯರೆ,

'ಮಾಮ್‌ಕೋಸ್'ದ ಸಾಗರ ಶಾಖೆಗೆ ಮಲೆನಾಡಿನಾದ್ಯಂತದಿಂದ ಬೆಳೆಗಾರರು ಅಡಿಕೆ ಕಳಿಸುತ್ತಿದ್ದು, ಕೆಲವೊಮ್ಮೆ ಅಡಿಕೆ ವ್ಯಾಪಾರಕ್ಕೆಂದು ಇಷ್ಟು ದೂರದಿಂದ ಅಲ್ಲಿಗೆ ಹೋದಾಗ ಸೊಸೈಟಿಗೆ ರಜಾ ಇರುವುದು ರೈತರಿಗೆ ಆಘಾತವುಂಟುಮಾಡುತ್ತಿದೆ.

ಸೊಸೈಟಿಯ ಕ್ಯಾಲೆಂಡರಿನಲ್ಲಿ ಮುಂಚಿತವಾಗಿ ಪ್ರಕಟಿಸಿರದ ಇಂಥ ಅನಿರೀಕ್ಷಿತ ರಜೆ ಅಥವಾ ವ್ಯಾಪಾರದ ನಿಲುಗಡೆಯ ಸಂದರ್ಭಗಳಲ್ಲಿ ಆ ವಿಚಾರವನ್ನು ಕಡೇ ಪಕ್ಷ 10-15 ದಿನ ಮುಂಚಿತವಾಗಿಯಾದರೂ ಪತ್ರಿಕೆಗಳ ಮೂಲಕ ಪ್ರಚುರಪಡಿಸಿದಲ್ಲಿ ಈ ಪ್ರಾಂತ್ಯದ ರೈತರಿಗೆ ಅತ್ಯಂತ ಪ್ರಯೋಜನವಾಗುತ್ತದೆ.

'ಮಾಮ್‌ಕೋಸ್'ನವರು ಗಮನಿಸುತ್ತಾರೆಂದು ಆಶಿಸುತ್ತೇನೆ.

—ಎಚ್. ಎಸ್. ಕಳಸಪ್ಪ
ಕೆಸವೆ, ಕೊಪ್ಪ

ಹೊಸ ಅಂಕಣಕ್ಕೆ ಸ್ವಾಗತ

ಮಾನ್ಯರೆ,

ಮೂಡ್ಬಾಗಿಲು ಮೂರ್ತಿಯವರ 'ಸಂತೆ ಮಾತು' ರಾಜಕೀಯ ವಿಡಂಬನೆಯಿಂದ ಕೂಡಿದ್ದು, 'ಲಂಕೇಶ್ ಪತ್ರಿಕೆ'ಯ 'ಹುಬ್ಬಳ್ಳಿಯಾಂವ'ನ ನೆನಪನ್ನು ತರುವುದು. ಬೇರೆ ವಿಷಯಗಳ ಮಧ್ಯೆ ಈ ರೀತಿಯ ಉಪ್ಪಿನಕಾಯಿ ಪತ್ರಿಕೆಗೆ ಅಗತ್ಯವಾಗಿದ್ದು; ಅದನ್ನು ಓದುಗರಿಗಾಗಿ ಉಣಬಡಿಸಲು ಯತ್ನಿಸಿರುವ ಶ್ರೀನಿವಾಸಮೂರ್ತಿಯವರಿಗೆ ಧನ್ಯವಾದಗಳು. ಜೈ ಮೂಡ್ಬಾಗಿಲ್ಲು ಮಾಡಾತ್ಮ!

—ಎಸ್. ಎಲ್. ಮಹಾಬಲ ರಾವ್,
ನ. ರಾ. ಪುರ

ಹೆಚ್ಚುವರಿ ಸೀಮೆಯೆಣ್ಣೆಗೆ ಜಿ.ಪಂ.ಗೆ ಬೇಡಿಕೆ

ಕೊಪ್ಪ : ಈ ತಾಲ್ಲೂಕಿನಲ್ಲಿ ಸೀಮೆಯೆಣ್ಣೆ ಪೂರೈಕೆಯಲ್ಲಿ ಈಚೆಗೆ ಉಂಟಾಗಿರುವ ಕೊರತೆಯನ್ನು ನೀಗಲು ಇನ್ನೂ 20 ಸಾವಿರ ಲೀಟರ್ ಸೀಮೆಯೆಣ್ಣೆ ಒದಗಿಸುವಂತೆ ಕ್ಷೇತ್ರಾಭಿವೃದ್ಧಿ ಅಧಿಕಾರಿ ರಾಮಮೂರ್ತಿ ಜಿಲ್ಲಾ ಪರಿಷತ್ತಿಗೆ ಮನವಿ ಮಾಡಿದ್ದಾರೆ. ಈ ಕುರಿತು 13.3.88ರ 'ಮುಂಜಾವು' ವರದಿಯನ್ನು ಅವರು ಉಲ್ಲೇಖಿಸಿದ್ದಾರೆಂದು ತಿಳಿದು ಬಂದಿದೆ.

ಅಡಿಕೆ ಧಾರಣೆ

ಶಿವಮೊಗ್ಗ 26-3-1988
ಸರಕು 3800 – 4511
ಬೆಟ್ಟೆ 2800 – 3210
ಗೊರಬಲು : 800 – 1200

ಸಾಗರ 26-3-1988
ಚಿಕಣಿ 4500 – 4800
ಚಾಲಿ : 1300 – 1800
ಸಿಪ್ಪೆಗೋಟು : 400 – 850

ಮಂಗಳೂರು 26.3.1988
ಏಲಕ್ಕಿ : 120 – 140
ಕಾಳು ಮೆಣಸು : 3818 – 3838

ಧನ್ಯವಾದ ಸಮರ್ಪಣೆ

ನೋಂದಣಿ ಇಲಾಖೆಯಲ್ಲಿ ಕಳೆದ 38 ವರ್ಷಗಳಿಂದ ಸೇವೆ ಸಲ್ಲಿಸಿ ಇದೀಗ ತಾ|| 31.3.1988ರಿಂದ ನಿವೃತ್ತಿಯಾಗುತ್ತಿರುವ ನಾನು, ನನ್ನ ಸೇವಾವಧಿಯಲ್ಲಿ ನನ್ನೊಂದಿಗೆ ಸಹಕರಿಸಿದ, ಪ್ರೀತ್ಯಾದರಗಳನ್ನು ತೋರಿದ ಎಲ್ಲ ಸಾರ್ವಜನಿಕರು, ಸಹೋದ್ಯೋಗಿಗಳು ಮತ್ತು ಎಲ್ಲ ಆತ್ಮೀಯರಿಗೂ ಈ ಸಂದರ್ಭದಲ್ಲಿ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ

—ಅಬ್ದುಲ್ ರಹೀಂ,
ದ್ವಿತೀಯ ದರ್ಜೆ ಸಹಾಯಕ,
ಉಪನೋಂದಣಾಧಿಕಾರಿಗಳ ಕಛೇರಿ,
ಕೊಪ್ಪ

ಬರುವ ವರ್ಷದಿಂದ ಎಲ್ಲ ಮು|| ದೇವಾಲಯಗಳಿಗೆ

ಕನಿಷ್ಠ 2 ಸಾವಿರ ರೂ. ತಸ್ತೀಕ್ ನೀಡಿಕೆ

ಹರಿಹರಪುರ : ರಾಜ್ಯದ ಎಲ್ಲಾ ಮುಜರಾಯಿ ದೇವಾಲಯಗಳಿಗೂ ಬರುವ ವರ್ಷದಿಂದ ಕನಿಷ್ಠ ಪಕ್ಷ 2 ಸಾವಿರ ರೂ. ತಸ್ತೀಕ್ ಹಣ ನೀಡಲು ಸರ್ಕಾರ ನಿರ್ಧರಿಸಿದ್ದು, ಇದಕ್ಕೆ ಪೂರಕವಾಗಿ ಧಾರ್ಮಿಕ ಸಂಸ್ಥೆಗಳ ಕುರಿತ ಕರಡು ಮಸೂದೆಯೊಂದರ ಕೆಲಸ ಆರಂಭವಾಗಿದೆ ಎಂದು ರಾಜ್ಯ ದತ್ತಿ ಖಾತೆಯ ಸಚಿವ ಅಮರನಾಥ ಶೆಟ್ಟಿ ಇಲ್ಲಿ ಮಾ. 13 ರಂದು ನಡೆದ ಕೊಪ್ಪ ತಾ|| ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತ ಪ್ರಕಟಿಸಿದರು.

ಸಮಾರೋಪ ಭಾಷಣ ಮಾಡಿದ ಯುವಜನ ಸೇವಾ ಸಚಿವ ಬಿ. ಎಲ್. ಶಂಕರ್, ದೇವರು-ಧರ್ಮದ ಬಗೆಗಿನ ಜನತೆಯ ಭಾವನೆಗಳು ಇಂದು ಕೆಲವೇ ಜನರ ಸ್ವಾರ್ಥ ಸಾಧನೆಗೆ ಬಳಕೆಯಾಗುತ್ತಿರುವುದನ್ನು ಹಾಗೂ, ಮನುಷ್ಯನನ್ನು ಮೃಗತ್ವದಿಂದ ಮನುಷ್ಯತ್ವಕ್ಕೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಿದ್ದ ಧರ್ಮ ಇಂದು ತನ್ನ ಉದ್ದೇಶಿತ-ನಿರ್ದೇಶಿತ ಮಾರ್ಗದಿಂದ ಸರಿದು ಕವಲುಗಳಲ್ಲಿ ಹರಿದು ಹೋಗುತ್ತಿರುವುದನ್ನು ಎತ್ತಿ ಹೇಳಿ, ಇಂಥದೊಂದು ಸಂದರ್ಭದಲ್ಲಿ 'ಅಪ್ರಿಯವಾದರೂ ಸತ್ಯವಾದುದನ್ನು ಹೇಳುವವರ' ವಿರಳ ಪಂಕ್ತಿಗೆ ಸೇರಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಗೋವಿಂದಗೌಡರು, ಸಂಚಾಲಕರ ಸಮಿತಿಯ ಕಾರ್ಯದರ್ಶಿ ನಾಗೇಂದ್ರ ಭಟ್ಟರನ್ನು ಶಾಲು ಹೊದಿಸಿ ಸನ್ಮಾನಿಸಿದರು. ವಿ. ರಾಮರಾವ್, ಜಿ. ಸುಬ್ಬರಾವ್, ಎ. ಪಿ. ವಿವೇಕಾನಂದ ಮಾತನಾಡಿದರು. ಸಮಿತಿ ಅಧ್ಯಕ್ಷ ಬಿ. ಜಿ. ಚಿದಂಬರ್ ಸ್ವಾಗತಿಸಿ, ನೀಲಕಂಠ ಭಟ್ ವಂದಿಸಿದರು.

ಬಹುತೇಕ ಎಲ್ಲಾ ಚಂದಾದಾರರಿಗೂ ಚಂದಾ ಬಾಕಿಯ ವಿವರಗಳನ್ನು ಈಗಾಗಲೇ ತಿಳಿಸಿಯಾಗಿದೆ. ಮಾರ್ಚ್ ಕೊನೆಯೊಳಗಾದರೂ ಚುಕ್ತಾ ಮಾಡಬೇಕಾಗಿ ಕೋರುತ್ತೇವೆ. **—ಸಂ.**

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ

ಕೊಪ್ಪ ಅರಣ್ಯ ವಿಭಾಗ, ಕೊಪ್ಪ

ಪ್ರಕಟಣೆ

ನಂ. ಎ 3/ ಎಪಿಬಿ/ ಸಿ ಆರ್/ 96/87-88

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತಿದ್ದುಪಡಿಯಾದ ಕರ್ನಾಟಕ ಲೆಕ್ಕ ಸಂಹಿತೆಯ ಪ್ರಕಾರ ಅರಣ್ಯ ಇಲಾಖೆಯ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಮತ್ತು ಸಣ್ಣ ಕಾಮಗಾರಿ ನಿರ್ವಹಣೆ ವಿಧಾನದ ಮುಖಾಂತರ ನಿರ್ವಹಿಸಲಿದ್ದು, ಕಾಮಗಾರಿಗಳನ್ನು ಕೈಗೊಳ್ಳುವವರು "ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರ"ರಾಗಿ ನೋಂದಾಯಿಸಲ್ಪಟ್ಟಿರಬೇಕು. ಆದುದರಿಂದ ಇಲಾಖೆಯ ಹಲವು ಬಗೆಯ ಕಾಮಗಾರಿಗಳನ್ನು ಕೈಗೊಳ್ಳಲಿಚ್ಛಿಸುವವರು ಕೂಡಲೇ 30-00 ರೂ ಗಳನ್ನು (... ಗೆ ಜಮಾ) ಪಾವತಿಸಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ, ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರೆಂದು ಈ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಲು ಕೋರಿದೆ.

ಹೆಚ್ಚಿನ ವಿವರಗಳನ್ನು ಕಛೇರಿಯಿಂದ ಪಡೆಯಬಹುದು.

ತಾ|| 15-3-88

(ಸಹಿ) ಕಿಶನ್ ಸಿಂಗ್ ಸುಗಾರ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಿಗೆ ಅಚ್ಚುಕೂಟ, ಕೊಪ್ಪ